**ಕೆಜಿಟಿಟಿಐ, ಬೆಂಗಳೂರು ಕೇಂದ್ರದಲ್ಲಿ ಸಿಎನ್‌ಸಿ ತರಬೇತಿಯ ಉಪಯೋಗ ಪಡೆದು, ಉಜ್ವಲ ಭವಿಷ್ಯವನ್ನು ರೂಪಿಸಿಕೊಂಡ ಶ್ರೀ ಚೇತನ್ ರವರ ಯಶೋಗಾಥೆ – ಅವರದೇ ಮಾತುಗಳಲ್ಲಿ.**



ನನ್ನ ಹೆಸರು ಚೇತನ್. ತುಮಕೂರು ಜಿಲ್ಲೆ ಕುಣಿಗಲ್ ತಾಲೂಕಿನ ಯಡಿಯೂರು ಹೋಬಳಿ ಗೌಡಗೆರೆಪೋಸ್ಟ್ ಭುವನ ಪಾಳ್ಯ ಗ್ರಾಮದ ನಿಂಗಣ್ಣ ಮತ್ತು ಮೀನಮ್ಮರವರ ಪುತ್ರ. ತಂದೆ ಮತ್ತು ತಾಯಿ ವ್ಯವಸಾಯ ವೃತ್ತಿಮಾಡಿ ಜೀವನವನ್ನು ನಡೆಸುತ್ತಿದ್ದಾರೆ. ನಮ್ಮ ತಂದೆ ತಾಯಿಗೆ ನಾವು ಇಬ್ಬರು ಮಕ್ಕಳು. ಇದರಲ್ಲಿ ನಾನು ಮೊದಲನೆ ಮಗ. ನಾನು ಒಂದರಿಂದ ನಾಲ್ಕನೇ ತರಗತಿಯವರೆಗಿನ ಪ್ರಾಥಮಿಕ ವಿದ್ಯಾಭ್ಯಾಸವನ್ನು ನನ್ನ ಹುಟ್ಟೂರಿನಲ್ಲೇ ಮುಗಿಸಿ, ಐದರಿಂದ ಏಳನೇ ತರಗತಿಯ ವಿದ್ಯಾಭ್ಯಾಸವನ್ನು ಪಕ್ಕದ ಗ್ರಾಮವಾದ ಬಸವನ ಮತ್ತಿಕೆರೆಯಲ್ಲಿ ಮುಗಿಸಿ, ನಂತರ ಪ್ರೌಢಶಾಲಾ ವಿದ್ಯಾಭ್ಯಾಸಕ್ಕಾಗಿ ಕುಣಿಗಲ್ ತಾಲ್ಲೂಕಿನ ಮಹಾತ್ಮ ಗಾಂಧಿ ಸರ್ಕಾರಿ ಶಾಲೆಯಲ್ಲಿ ಸೇರಿ ಹತ್ತನೇ ತರಗತಿಯಲ್ಲಿ ಶೇಕಡಾ 60% ಫಲಿತಾಂಶದೊಂದಿಗೆ ಉತ್ತೀರ್ಣನಾದೆ. ನಂತರ ತಂದೆಯವರ ಸಲಹೆಯಂತೆ ಕೈಗಾರಿಕಾ ತರಬೇತಿ ಪಡೆಯಲು ಕುಣಿಗಲ್‌ನಲ್ಲಿ ಇರುವ ಡಾ. ಹರ್ಷವರ್ಧನ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಜೋಡಣಾ ವಿಭಾಗಕ್ಕೆ ಸೇರಿಕೊಂಡೆನು. ಕೈಗಾರಿಕ ತರಬೇತಿ ಕೇಂದ್ರಕ್ಕೆ ಸೇರಿದ ನಂತರ ವಿಷಯಗಳು ಪ್ರಾಯೋಗಿಕವಾಗಿ ಇದ್ದಿದ್ದರಿಂದ ತಿಳಿದುಕೊಳ್ಳಲು ತುಂಬ ಸುಲಭವಾಯಿತು. ಇದರ ನಡುವೆ ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆಯು ಆಸಕ್ತಿಯುಳ್ಳ ಬಡ ಮಕ್ಕಳಿಗಾಗಿ ಸಂಸ್ಥೆಯು ಉಚಿತ ತರಬೇತಿಯನ್ನು ನೀಡಲು ತೀರ್ಮಾನ ಕೈಗೊಂಡಿತ್ತು. ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ನಾವು ತುಂಬಾ ಆಸಕ್ತಿಯಿಂದ ಕಲಿತಿದ್ದನ್ನು ಗಮನಿಸಿ ಉಚಿತ ತರಬೇತಿಗೆ ಅರ್ಹರೆಂದು ನನ್ನನ್ನು ಮತ್ತು ನನ್ನ ಸ್ನೇಹಿತರಾದ 5 ಜನರನ್ನು ಕೈಗಾರಿಕಾ ಸಂಸ್ಥೆಯ ಪ್ರಾಂಶುಪಾಲರು ಉಚಿತ ತರಬೇತಿಗೆ ಕಳುಹಿಸಲು ನಿರ್ಧರಿಸಿ ಆಯ್ಕೆ ಮಾಡಿದರು. ನಂತರ ನಾವು ತರಬೇತಿಯನ್ನು ಪಡೆಯಲು ಕುಣಿಗಲ್‌ನಿಂದ ಬೆಂಗಳೂರಿಗೆ ಬಂದೆವು.

ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ನಾವು ಜೋಡಣಾ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿದ್ದ ಕಾರಣ ನಮಗೆ ಮ್ಯಾನುಫ್ಯಾಕ್ಚರಿಂಗ್ ಟೆಕ್ನಾಲಜಿ ಎಂಬ ವಿಭಾಗದಲ್ಲಿ ತರಬೇತಿಯನ್ನು ನೀಡಲು ಬೆಂಗಳೂರಿನ ಬಾಗಲಗುಂಟೆಯಲ್ಲಿರುವ ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆಯು ಅವಕಾಶವನ್ನು ಕಲ್ಪಿಸಿಕೊಟ್ಟಿತು. ಈ ಕೇಂದ್ರದಲ್ಲಿ ಕಲಿಸುವ ಎಲ್ಲಾ ಉಪಕರಣಗಳು, ಯಂತ್ರಗಳು ಮತ್ತು ಕಂಪ್ಯೂಟರ್‌ಗಳ ವ್ಯವಸ್ಥೆಯು ಅತ್ಯುತ್ತಮವಾಗಿತ್ತು, ಹಳ್ಳಿಯಿಂದ ನಾವು ತರಬೇತಿಗೆ ಹೋಗಿದ್ದ ಕಾರಣ ಮೊದಲ ಬಾರಿಗೆ ನಾವು ಕಲಿಯಲು ಸ್ವಲ್ಪ ಕಷ್ಟವಾದರೂ ತರಬೇತುದಾರರು ತುಂಬಾ ಸಮಾಧಾನದಿಂದ ಎಲ್ಲವನ್ನು ತಿಳಿಸಿಕೊಡುತ್ತಿದ್ದರು. ಈ ತರಬೇತಿಯನ್ನು 3 ತಿಂಗಳ ಅವಧಿಯಲ್ಲಿಯೇ ನಾವು ಪೂರ್ಣಗೊಳಿಸಬೇಕಾದ ಕಾರಣ, ಹಾಗೂ ನಮಗೆ ಕಲಿಯುವ ಆಸಕ್ತಿ ಇರುವುದನ್ನು ಗಮನಿಸಿ ತರಬೇತುದಾರರು ತಾವು ಸಂಸ್ಥೆಯ ಕೆಲಸದ ಅವಧಿಯಲ್ಲದೆ ಸ್ವಲ್ಪ ಗಂಟೆಗಳ ಹೆಚ್ಚು ಸಮಯ ಸಂಸ್ಥೆಯಲ್ಲಿದ್ದು, ಗುಣಮಟ್ಟದ ತರಗತಿಗಳನ್ನು ಹೇಳಿಕೊಡುತ್ತಿದ್ದರು. ನಮಗೆ CNC ಯಂತ್ರದ ಬಗ್ಗೆ ಅರಿವೇ ಇಲ್ಲದನ್ನು ಅರಿತು ಅದರ ಬಗ್ಗೆ ಹೆಚ್ಚು ಜ್ಞಾನವನ್ನು ಮತ್ತು ಅದನ್ನು ಉಪಯೋಗಿಸುವ ವಿಧಾನವನ್ನು ನಮಗೆ ಕಲಿಸಿಕೊಟ್ಟರು. ಕಂಪ್ಯೂಟರಿನಲ್ಲಿ CAD & CAM ಸುಲಭವಾಗಿ ಅರ್ಥವಾಗುವ ಹಾಗೆ ಹೇಳಿಕೊಟ್ಟಿದ್ದರಿಂದ ನಮಗೆ ಬೇಗ ಕಲಿಯಲು ಉಪಯೋಗವಾಯಿತು. ತರಬೇತಿಯನ್ನು ಮುಗಿಸಿದ ನಂತರ ನಮಗೆ ಪರೀಕ್ಷೆಯನ್ನು ಸಂಸ್ಥೆಯು ಏರ್ಪಡಿಸಿತ್ತು. ಅದರಲ್ಲಿ ಉತ್ತೀರ್ಣರಾದ ನಂತರ

ಪ್ರಮಾಣಪತ್ರವನ್ನು ಸಂಸ್ಥೆಯು ನೀಡಿತು. ಇದರೊಟ್ಟಿಗೆ ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಕೇಂದ್ರದಿಂದ ತರಬೇತಿಯನ್ನು ಮುಗಿಸಿದೆವು. ನಂತರ ನಾವು ಹಿಂತಿರುಗಿ ಕುಣಿಗಲ್ಲಿನ ಕೈಗಾರಿಕ ತರಬೇತಿ ಕೇಂದ್ರಕ್ಕೆ ಹೋದೆವು. ಆ ನಂತರ ನಮಗೆ ಯಂತ್ರೋಪಕರಣಗಳನ್ನು ಉಪಯೋಗಿಸುವುದರ ಬಗ್ಗೆ ಹೆಚ್ಚು ಆಸಕ್ತಿ ಮತ್ತು ಅನುಭವ ಹೆಚ್ಚಾಯ್ತು. ಕೈಗಾರಿಕಾ ತರಬೇತಿ ಎರಡನೇ ವರ್ಷದ ತರಬೇತಿ ಮುಗಿಸಿ. ನಂತರ ಟಿಡಿಪಿಎಸ್ ಎಂಬ ಕಾರ್ಖಾನೆಯಲ್ಲಿ ಅಪ್ರೆಂಟಿಶಿಪ್ ಟ್ರೈನಿಂಗ್‌ಗೆ ಸೇರಿಕೊಂಡು ಅಲ್ಲಿ 9 ತಿಂಗಳ ತರಬೇತಿಯನ್ನು ಮಾಡಿದೆನು.



ಇದಾದ ಬಳಿಕ ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಕೇಂದ್ರದಲ್ಲಿ ತರಬೇತುದಾರರಾದ ಕೃಷ್ಣಮೂರ್ತಿ ಸರ್ ಎಂಬುವವರ ಪರಿಚಯವಿದ್ದರಿಂದ, ಅವರ ಸಲಹೆ ಪಡೆದು ನಂತರ ನಾನು ಡಿಪ್ಲೊಮಾವನ್ನು ಮಾಡಲು ನಿರ್ಧರಿಸಿದೆನು. ಹಾಗಾಗಿ ಡಿಪ್ಲೊಮಾ ಮಾಡಲು ಬೆಂಗಳೂರಿನ ಪಿವಿಪಿ ಪಾಲಿಟೆಕ್ನಿಕ್‌ನಲ್ಲಿ ಅವಕಾಶ ಸಿಕ್ಕಿತು. ಡಿಪ್ಲೊಮೊ ಮಾಡುವ ಸಂದರ್ಭದಲ್ಲಿ ನಮಗೆ ಯಾವುದೇ ಸಂದೇಹ ಅಥವಾ ಏನಾದರೂ ತಿಳಿದುಕೊಳ್ಳುವ ಆಸಕ್ತಿ ಇದ್ದಲ್ಲಿ ಸಂಸ್ಥೆಗೆ ಹೋಗಿ ತಿಳಿದುಕೊಳ್ಳಲು ಅವಕಾಶವನ್ನು ಮಾಡಿಕೊಡುತ್ತಿದ್ದರು. ಇದರಿಂದ CNC ಮೆಷಿನ್‌ನ ಬಗ್ಗೆ ಹೆಚ್ಚು ವಿಷಯಗಳನ್ನು ತಿಳಿದುಕೊಳ್ಳಲು ಉಪಯೋಗವಾಗುತ್ತಿತ್ತು. ಡಿಪ್ಲೊಮಾದಲ್ಲಿ ಬರುತ್ತಿದ್ದ CNC ಮೆಷಿನ್ ಬಗೆಯ ವಿಷಯಗಳನ್ನು ಮತ್ತು ಪ್ರೋಗ್ರಾಮಿಂಗ್ ಅನ್ನು ತುಂಬಾ ಸುಲಭವಾಗಿ ಅರ್ಥಮಾಡಿಕೊಂಡು ನಮ್ಮ ಡಿಪ್ಲೊಮಾ ಸ್ನೇಹಿತರಿಗೆ ನಾನೇ ಹೇಳಿಕೊಡುತ್ತಿದ್ದೆ. ಇದರ ಮಧ್ಯೆ ಡಿಪ್ಲೊಮಾ ವ್ಯಾಸಂಗಕ್ಕಾಗಿ ಬೇಕಾಗಿದ್ದ ಹಣವನ್ನು ನಾವು ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಕೇಂದ್ರದಲ್ಲಿ ಕಲಿತ ಅನುಭವದಿಂದ ನಾನು CNC ಮೆಷಿನ್ ಆಪರೇಟರ್ ಆಗಿ ಚೈತನ್ಯ ಪ್ರಸಿಟೆಕ್ ಎಂಬ ಕಂಪೆನಿಯಲ್ಲಿ ರಾತ್ರಿಪಾಳಿಯ ಕೆಲಸಕ್ಕೆ ಸೇರಿಕೊಂಡೆನು. ಅದರಲ್ಲಿ ಬಂದಂತಹ ಹಣವನ್ನು ಡಿಪ್ಲೊಮಾ ವ್ಯಾಸಂಗದ ವಾರ್ಷಿಕ ಫೀಸಿಗಾಗಿ ಬಳಸಿಕೊಂಡು, ಡಿಪ್ಲೊಮಾ ವಿದ್ಯಾಭ್ಯಾಸವನ್ನು ಶೇಕಡಾ 89% ಫಲಿತಾಂಶವನ್ನು ಪಡೆದು ಉತ್ತೀರ್ಣನಾದೆನು.

ಬಳಿಕ ಡಿಪ್ಲೊಮಾ ಆಧಾರದ ಮೇಲೆ ಟೊಯೋಟಾ ಕಿರ್ಲೋಸ್ಕರ್ ಕಂಪನಿಯಲ್ಲಿ ಅಪ್ರೆಂಟಿಶಿಪ್ ಟ್ರೈನಿಂಗ್‌ಅನ್ನು ಪಡೆಯಲು ಸಂದರ್ಶನದಲ್ಲಿ ಆಯ್ಕೆಯಾದೆನು. ನಂತರ ಒಂದೂವರೆ ವರ್ಷಗಳ ಕಾಲ ಅಲ್ಲೇ ಅಪ್ರೆಂಟಿಶಿಪ್ ಟ್ರೈನಿಂಗ್‌ಅನ್ನು ಸಂಪೂರ್ಣ ಗೊಳಿಸಿದೆನು. ಅದು ಕಾರುಗಳನ್ನು ಉತ್ಪಾದಿಸುವ ಕಾರ್ಖಾನೆಯಾಗಿದ್ದು ಅಲ್ಲಿ ಯಾವುದೇ ಖಾಯಂ ಕೆಲಸಗಳು ಇಲ್ಲದಿರುವುದರಿಂದ ನಮ್ಮನ್ನು ಗುತ್ತಿಗೆ ಆಧಾರದ ಮೇಲೆ ಕೆಲಸವನ್ನು ಮುಂದುವರೆಸಲು ಸೂಚಿಸಿದರು. ನನಗೆ ಅದರಲ್ಲಿ ಆಸಕ್ತಿ ಇಲ್ಲದ ಕಾರಣ ನಾನು ಆ ಕಾರ್ಖಾನೆಯನ್ನು ಬಿಟ್ಟು ಹೊರಗೆ ಬಂದೆನು.

ನಂತರ ಯಾವುದೇ ಬೇರೆ ವಲಯಗಳಲ್ಲಿ ನನಗೆ ಕೆಲಸ ಸಿಗಲಿಲ್ಲ. ಆದ್ದರಿಂದ ನಾನು ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆಯ ತರಬೇತುದಾರರಾದ ಶ್ರೀ ಕೃಷ್ಣಮೂರ್ತಿ ಸರ್ ರವರಿಗೆ ತಿಳಿಸಿದೆನು ಅದಕ್ಕೆ ಅವರು ಕೆಲಸ ಪಡೆಯಲು ಸಹಾಯವನ್ನು ಮಾಡುತ್ತೇನೆಂದು ಹೇಳಿದರು. ಅಷ್ಟರಲ್ಲಿ ನನಗೆ ನೌಕರಿ ಎಂಬ ಅಪ್ಲಿಕೇಶನ್ ಮುಖಾಂತರ Ace Manufacturing Systems Pvt. Ltd. (AMS) Peenya ಸಂಸ್ಥೆಯಲ್ಲಿ ಸಂದರ್ಶನಕ್ಕೆ ಕರೆ ಬಂದಿತು. ಈ ವಿಷಯವನ್ನು ತರಬೇತುದಾರರಾದ ಶ್ರೀ ಕೃಷ್ಣಮೂರ್ತಿ ಸರ್

ಅವರಿಗೆ ತಿಳಿಸಿದೆನು, ಅವರು ಸಂದರ್ಶನಕ್ಕೆ ಉಪಯೋಗವಾಗುವ ಸಲಹೆ ನೀಡಿ ಸಹಾಯ ಮಾಡಿದರು. AMS ಸಂಸ್ಥೆಯು CNC ಯಂತ್ರೋಪಕರಣಗಳನ್ನು ಉತ್ಪಾದಿಸುವ ಕಾರ್ಖಾನೆಯಾಗಿದ್ದು, ಸಂದರ್ಶನದಲ್ಲಿ ಕೆಜಿಟಿಟಿಐನಲ್ಲಿ ಕಲಿತಂಥ ವಿಷಯಗಳು ಮತ್ತು ಶ್ರೀ ಕೃಷ್ಣಮೂರ್ತಿ ಸರ್ ನೀಡಿದ ಸಲಹೆಗಳು ಸಹಾಯವಾದವು. ಇದಾದ ಬಳಿಕ ನಾನು AMS ಸಂಸ್ಥೆಯ ಕೆಲಸಕ್ಕೆ ಆಯ್ಕೆಯಾಗಿ, ಅಲ್ಲಿ CNC ಯಂತ್ರೋಪಕರಣದ ಅಂತಿಮ ಗುಣಮಟ್ಟ ವಿಭಾಗದಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಿತು.




AMS ಸಂಸ್ಥೆಯಲ್ಲಿ ಕೆಲಸ ಮಾಡುವುದರ ಜೊತೆಗೆ ನನಗೆ ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆ ಮತ್ತೊಂದು ಸುವರ್ಣಾವಕಾಶ ನೀಡಿತು. ಅದೇನೆಂದರೆ ಭಾನುವಾರದ ರಜಾ ಸಮಯದಲ್ಲಿ ಉಳಿದ ತರಬೇತಿಯನ್ನು ಪಡೆಯಲು ಅವಕಾಶವನ್ನು ಕಲ್ಪಿಸಿಕೊಟ್ಟಿತು. ಕೆಜಿಟಿಟಿಐನಲ್ಲಿ ತರಬೇತಿಯನ್ನು ಪಡೆದ ಬಳಿಕ ಆಗುವ ಪ್ರಯೋಜನಗಳ ಬಗ್ಗೆ ಅರಿತಿದ್ದರಿಂದ ನಾನು ಮತ್ತೆ ತರಬೇತಿಯನ್ನು ಪಡೆಯಲು ನಿರ್ಧರಿಸಿದೆ. ಜೊತೆಗೆ ಈ ಹಿಂದೆ ನಾನು ಪಡೆದಿಲ್ಲದ ವಿಷಯಗಳ ಕುರಿತು ತರಬೇತಿಯನ್ನು ಮಾಡಲು ಮತ್ತೊಂದು ಅವಕಾಶವನ್ನು ಕೆಜಿಟಿಟಿಐ ಸಂಸ್ಥೆ ಕಲ್ಪಿಸಿಕೊಟ್ಟಿತು. ಈ ಸಮಯದಲ್ಲಿ ತರಬೇತುದಾರರಾದ ಸುರೇಶ್ ಸರ್ ಮತ್ತು ಪ್ರೀತಮ್ ಸರ್ ನಮಗೆ ಭಾನುವಾರದ ಸಮಯದಲ್ಲಿ ಹೇಳಿಕೊಟ್ಟರೂ, ಕಲಿಕೆಗೆ ಯಾವುದೇ ತೊಂದರೆಯಾಗದಂತೆ ಎಲ್ಲವನ್ನು ಪರಿಪೂರ್ಣವಾಗಿ ಹೇಳಿಕೊಡುತ್ತಿದ್ದರು. ಇದೆಲ್ಲದರಿಂದ ನಾನು ಸಂಸ್ಥೆಯಲ್ಲಿ ಸುಲಭವಾಗಿ ಕೆಲಸ ಮಾಡಲು ಅನುಕೂಲವಾಗುತ್ತಿತ್ತು. ನಂತರ ಇದೆಲ್ಲರ ಅನುಭವದ ಜೊತೆಗೆ ಈಗ ಕೆಲಸನಿರ್ವಹಿಸುತ್ತಿರುವ ಜಾಗದಲ್ಲಿ CNC ಯಂತ್ರೋಪಕರಣಗಳ ಬಗ್ಗೆ ಹೆಚ್ಚು ಜ್ಞಾನವನ್ನು ಹೊಂದಿದ್ದು ಕೆಲಸ ಮಾಡಲು ತುಂಬ ಸುಲಭ. ಈಗಲೂ CNC ಯಂತ್ರೋಪಕರಣಗಳ ಬಗ್ಗೆ ಯಾವುದೇ ಅನುಮಾನ ತಿಳಿದುಕೊಳ್ಳುವ ಅಂಶಗಳಿದ್ದರೆ ನಾವು ತರಬೇತುದಾರರನ್ನು ಕೇಳಿದರೆ ಯಾವುದೇ ಕ್ಷಣದಲ್ಲಾದರೂ ಮಾಹಿತಿಯನ್ನು ತಿಳಿಸಿ ತಿಳಿಸಿಕೊಡುತ್ತಾರೆ ಮತ್ತು ಅದನ್ನು ಕಲಿಯಲು ಅವಕಾಶ ಮಾಡಿಕೊಡುತ್ತಾರೆ.




**ಕೆಜಿಟಿಟಿಐನಲ್ಲಿ ತರಬೇತಿ ಸಮಯದಲ್ಲಿ ನಾನು ವಿನ್ಯಾಸಗೊಳಿಸಿ ತಯಾರಿಸಿದಂಥ ಕೆಲವು ಸಿಎನ್‌ಸಿ ಮಾದರಿಗಳು.**




**ಈಗ ನಾನು, ಪ್ರಸ್ತುತ ಕೆಲಸ ಮಾಡುತ್ತಿರುವ AMS ಸಂಸ್ಥೆಯ ಒಂದು ನೋಟ.**




**ತರಬೇತಿ ನಂತರ ನಾನು ಪಡೆದಂಥ ಸರ್ಟಿಫಿಕೇಟ್.**



**ಕೆಜಿಟಿಟಿಐ ಬೆಂಗಳೂರು ಕೇಂದ್ರದ ಸಿಎನ್‌ಸಿ ವಿಭಾಗದ ನೋಟ**

ಹೆಚ್ಚಿನ ಮಾಹಿತಿಗಾಗಿ
ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ: